ಇಂದು ದಿಃ 07.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಬಿ.ಜಿ.ಕೆ. ವಕೀಲರಿಂದಃ**

ನಾನು Diploma in agriculture ಓದಿದ್ದು, tobacco board ನಲ್ಲಿ field assistant ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ರೂ.30,000/- ವೇತನ ಬರುತ್ತಿತ್ತು. ಈಗ ನಾನು ಕೆಲಸ ಮಾಡುತ್ತಿಲ್ಲ. SBI ನಲ್ಲಿರುವ ನನ್ನ ಖಾತೆಗೆ ವೇತನ ಜಮೆಯಾಗುತ್ತಿತ್ತು. ಕಳೆದ 8 ತಿಂಗಳಿಂದ ಕೆಲಸಕ್ಕೆ ಹೋಗುತ್ತಿಲ್ಲ. ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. Tobacco board ನಿಂದ ನನ್ನನ್ನು ರಿಲೀವ್ ಮಾಡಿರುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಚಾಲನಾ ಪರವಾನಗಿ ಇಲ್ಲದೇ ವಾಹನ ಚಲಾಯಿಸಬಾರದೆಂಬುದು ನನಗೆ ಗೊತ್ತಿದೆ. ಅಪಘಾತವಾದ ಕಾಲಕ್ಕೆ ಬೈಕ್ ಚಾಲನೆ ಮಾಡಲು ನನಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿ.

ನನಗೆ ಬೈಕ್ ಓಡಿಸುವುದು ಗೊತ್ತಿರಲಿಲ್ಲ ಆದರೂ ಸಹ ನಾನೇ ಬೈಕ್ ಓಡಿಸಿಕೊಂಡು ರಸ್ತೆಗೆ ಹೋಗಿರುವುದರಿಂದ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಸ್ನೇಹಿತನ ಬೈಕ್ ಓಡಿಸುತ್ತಿದ್ದೆ. ಅಪಘಾತದ ನಂತರ ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆ, ಆ ನಂತರ ಮೈಸೂರಿನ ಬೃಂದಾವನ ಆಸ್ಪತ್ರೆ ಹಾಗೂ ಆ ನಂತರ ಬೆಂಗಳೂರು ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. 13-15 ದಿನಗಳವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಬೃಂದಾವನ ಆಸ್ಪತ್ರೆಯಲ್ಲಿ ನಾನು ದಾಖಲಾಗಿಲ್ಲ ಆದ್ದರಿಂದ ಡಿಸ್ಚಾರ್ಜ್ ಸಮರಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಬೃಂದಾವನ ಆಸ್ಪತ್ರೆಯಲ್ಲಿ ನಾನು ಯಾವ ಚಿಕಿತ್ಸೆ ಪಡೆದಿದ್ದೇನೆ ಎಂದು ನೆನಪಿಲ್ಲ. ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಯಾರು ಚಿಕಿತ್ಸೆ ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಸೆಂಟ್ ಜಾನ್ಸ್ ಆಸ್ಪತ್ರೆಯ

ನಂತರ ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಕಡೆಯ ಬಾರಿ ಚಿಕಿತ್ಸೆ ಪಡೆದು 7 ತಿಂಗಳು ಆಗಿದೆ. ಈಗ ಮೊದಲಿನಂತೆ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜನ್ಮದಿನಾಂಕ 01.03.2002. ಅಪಘಾತವಾದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ, ರಸ್ತೆ ಡಿವೈಡರ್ ಇರಲಿಲ್ಲ. ನಾನು ಕುಶಾಲನಗರದ ಕಡೆಗೆ ಹೋಗುತ್ತಿದ್ದೆ, ಅಪಘಾತಪಡಿಸಿದ ವಾಹನ ನನ್ನ ಎಡಭಾಗದಿಂದ ಬಂದು ಅಪಘಾತಪಡಿಸಿದೆ. ಅಪಘಾತವಾದ ಸ್ಥಳದಿಂದ ರಸ್ತೆ ಅಂಚಿಗೆ ಎಷ್ಟು ಅಡಿ ಅಂತರವಿದೆ ಗೊತ್ತಿಲ್ಲ. ನಾನು ಸಂಚಾರಿ ನಿಯಮಗಳನ್ನು ಪಾಲಿಸಿದ್ದರೆ ಅಪಘಾತವನ್ನು ತಪ್ಪಿಸಬಹುದಿತ್ತು, ಅಪಘಾತಕ್ಕೆ ನಾನೇ ನೇರ ಹೊಣೆ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೆಲ್ಮೆಟ್ ಹಾಕಿದ್ದ ಬಗ್ಗೆ ಪೊಲೀಸ್ ದಾಖಲೆಯಲ್ಲಿ ಇರಬೇಕಾಗಿತ್ತು ನಾನು ಹೆಲ್ಮೆಟ್ ಹಾಕಿಲ್ಲದ ಕಾರಣ ಆ ಬಗ್ಗೆ ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪರಿಹಾರ ಕೇಳಲು ಬಾಧ್ಯನಲ್ಲ ಎಂದರೆ ಸರಿಯಲ್ಲ. ನನ್ನ ವಾಹನದ ಬಂಪರ್ ಹತ್ತಿರ ಡ್ಯಾಮೇಜ್ ಆಗಿದೆ. ಅಪಘಾತದ ಬಗ್ಗೆ ದರ್ಶನ್ ದೂರನ್ನು ಕೊಟ್ಟಿದ್ದಾರೆ. ಪರಿಹಾರ ಪಡೆಯಲು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳಿಗೆ ಪೂರಕವಾದ ದಾಖಲೆಗಳು ಇಲ್ಲದ ಕಾರಣ ನಾನು ಮೆಡಿಕಲ್ ವೆಚ್ಚ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಮೊದಲಿನಂತೆ ಕೆಲಸ ಮುಂದುವರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**